ಮಂಗಳೂರು ವಿಶ್ವವಿದ್ಯಾನಿಲಯ

**ಪರಿಶಿಷ್ಟ ಜಾತಿ/ವರ್ಗದ ವಿದ್ಯಾರ್ಥಿಗಳ ಮತ್ತು ನೌಕರರ ಕ್ಷೇಮಾಭಿವೃದ್ಧಿಗಾಗಿ ಲಭ್ಯವಿರುವ ಸೌಲಭ್ಯಗಳ ಹಾಗೂ ಕಾರ್ಯಕ್ರಮಗಳ ವಿವರ.**

1. **ಸಂಶೋಧನಾ ಶಿಷ್ಯವೇತನ (ಪಿಹೆಚ್.ಡಿ.):**
ಸಂಶೋಧನೆ ಮಾಡುತ್ತಿರುವ ಎಲ್ಲಾ ವಿದ್ಯಾರ್ಹತೆ ಹೊಂದಿರುವ ಪರಿಶಿಷ್ಟ ಜಾತಿ/ವರ್ಗದ ವಿದ್ಯಾರ್ಥಿಗಳಿಗೆ ಪ್ರತಿ ತಿಂಗಳಿಗೆ ರೂ.8,000/–ರಂತೆ ಶಿಷ್ಯವೇತನ ಹಾಗೂ ವಾರ್ಷಿಕ ಸಾದಿಲ್ವಾರು ವೆಚ್ಚ ರೂ.7,000/–(ಕಲಾ ಮತ್ತು ವಾಣಿಜ್ಯ ವಿಷಯಗಳಿಗೆ) ಮತ್ತು ರೂ.10,000/– (ವಿಜ್ಞಾನ ವಿಷಯಗಳಿಗೆ) ನೀಡಲಾಗುತ್ತದೆ.

* PhD ಕೋರ್ಸಿಗೆ ಪ್ರವೇಶಾತಿ ಪಡೆದ ತಿಂಗಳಿಂದಲೇ ಶಿಷ್ಯವೇತನ ನೀಡಲಾಗುತ್ತದೆ. ಕೋರ್ಸ್‌ವರ್ಕ್‌ನಲ್ಲಿ ಯಶಸ್ವಿಯಾಗಿ ತೇರ್ಗಡೆ ಹೊಂದಿ ನೋಂದಾವಣೆ ಮಾಡಿಸಲು ಒಂದು ವರ್ಷ ಸಮಯಾವಕಾಶ ಇರುತ್ತದೆ.

* ವಿಶ್ವವಿದ್ಯಾನಿಲಯದಿಂದ ಮಾನ್ಯತೆ ಪಡೆದ ಸಂಯೋಜಿತ ಹಾಗೂ ಸ್ವಾಯತ್ತ ಸಂಸ್ಥೆಗಳಲ್ಲಿ ಸಂಶೋಧನಾ ವ್ಯಾಸಂಗ ಮಾಡುವ ಪರಿಶಿಷ್ಟ ಜಾತಿ/ಪಂಗಡದ ವಿದ್ಯಾರ್ಥಿಗಳಿಗೂ ಸದರಿ ಸಂಶೋಧನಾ ಶಿಷ್ಯವೇತನದ ಸೌಲಭ್ಯ ನೀಡಲಾಗುವುದು.

2. **ಎಂ.ಫಿಲ್. ವಿದ್ಯಾರ್ಥಿಗಳಿಗೆ ಶಿಷ್ಯವೇತನ :**
ಎಂ.ಫಿಲ್. ವಿದ್ಯಾರ್ಥಿಗಳಿಗೆ ಮಾಸಿಕ ರೂ.2,000 ರಂತೆ 12 ತಿಂಗಳಿಗೆ ಹಾಗೂ ಸಾದಿಲ್ವಾರು ವೆಚ್ಚ ವರ್ಷಕ್ಕೆ ರೂ.5,000 ರಂತೆ ನೀಡಲಾಗುತ್ತದೆ.

3. **ಕ್ರೀಡಾ ವಿದ್ಯಾರ್ಥಿಗಳಿಗೆ ಧನಸಹಾಯ:**
ಬಿ.ಪಿ.ಇಡಿ ಮತ್ತು ಎಂ.ಪಿ.ಇಡಿ ವ್ಯಾಸಂಗ ಮಾಡುವ ಪರಿಶಿಷ್ಟ ಜಾತಿ/ಪಂಗಡ ವಿದ್ಯಾರ್ಥಿಗಳಿಗೆ ಸ್ಪೋರ್ಟ್ಸ್ ಕಿಟ್ ಖರೀದಿಸಲು ತಲಾ ರೂ.2,000/- ರಂತೆ ಧನಸಹಾಯ ನೀಡಲಾಗುತ್ತದೆ.

4. **ಹೆಚ್ಚುವರಿ ಊಟದ ವೆಚ್ಚದ ವೆಚ್ಚ ಭರಿಸುವುದು.**
ವಸತಿನಿಲಯಗಳಲ್ಲಿರುವ ರೂ. 2ಲಕ್ಷ ಆದಾಯ ಮಿತಿಯೊಳಗಿರುವ ಪರಿಶಿಷ್ಟ ಜಾತಿ/ಪಂಗಡದ ವಿದ್ಯಾರ್ಥಿಗಳಿಗೆ ಸಮಾಜ ಕಲ್ಯಾಣ ಇಲಾಖೆಯಿಂದ ನೀಡಲಾಗುವ ನಿರ್ವಹಣಾ ಭತ್ಯೆ ಹಾಗೂ EBLಗಳಿಗೂ ಮೀರಿ ಹೆಚ್ಚುವರಿ ಬರುವ ಊಟದ ವೆಚ್ಚವನ್ನು ಭರಿಸಲಾಗುತ್ತದೆ.

5. **ಪ್ರೌಢ ಪ್ರಬಂಧಕ್ಕೆ ಧನಸಹಾಯ:**
ಸ್ನಾತಕೋತ್ತರ ವಿಭಾಗಗಳಲ್ಲಿ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ಜಾತಿ/ಪಂಗಡ ವಿದ್ಯಾರ್ಥಿಗಳಿಗೆ ಪ್ರೌಢ ಪ್ರಬಂಧವನ್ನು ರಚಿಸಲು ತಲಾ ರೂ.5000/– ರಂತೆ ಧನಸಹಾಯ ನೀಡಲಾಗುತ್ತದೆ.

6. **ಶುಲ್ಕ ವಿನಾಯಿತಿ:**
ವಿಶ್ವವಿದ್ಯಾನಿಲಯದ ವಿವಿಧ ಕೋಸುಗಳಿಗೆ ಪ್ರವೇಶಾತಿ ಪಡೆಯುವ ರೂ.2 ಲಕ್ಷ ಆದಾಯ ಮಿತಿಯೊಳಗಿರುವ ಪರಿಶಿಷ್ಟ ಜಾತಿ/ಪಂಗಡ ವಿದ್ಯಾರ್ಥಿಗಳಿಗೆ ಪ್ರವೇಶಾತಿಗೆ ಸಂಬಂಧಿಸಿದ ಹಲವು ಶುಲ್ಕ ವಿನಾಯಿತಿಗಳನ್ನು ನೀಡಲಾಗುವುದು

7. **ಅಧ್ಯಯನ ಪ್ರವಾಸಕ್ಕೆ ಧನಸಹಾಯ :**
ಸ್ನಾತಕೋತ್ತರ ವಿಭಾಗಗಳಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳು ಯಾವುದೇ ಶೈಕ್ಷಣಿಕ ಪ್ರವಾಸಗಳಲ್ಲಿ ಕಡ್ಡಾಯವಾಗಿ ಭಾಗವಹಿಸಬೇಕಾಗಿ ಬಂದಲ್ಲಿ ಅದಕ್ಕಾಗಿ ತಗಲುವ ಸಂಪೂರ್ಣ ವೆಚ್ಚವನ್ನು ನಿಯಮಾವಳಿ ಪ್ರಕಾರ ಮಂಜೂರು ಮಾಡಲಾಗುವುದು, ಹಾಗೂ ಕ್ಷೇತ್ರ ಕಾರ್ಯಗಳಿಗೆ ಪ್ರವಾಸದ ವೆಚ್ಚವನ್ನು ಸಂಪೂರ್ಣ ಭರಿಸಲಾಗುವುದು.

8. ತರಬೇತಿ ಕಾರ್ಯಕ್ರಮಗಳು :
ಆಂಗ್ಲ ಭಾಷಾ ನೈಪುಣ್ಯತೆಯನ್ನು ಬೆಳೆಸಲು ಹಾಗೂ ಯು.ಜಿ.ಸಿ./ಜೆ ಆರ್ ಎಫ್/ಎಸ್.ಎಲ್.ಇ.ಟಿ ಮುಂತಾದ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಸಮರ್ಥವಾಗಿ ಎದುರಿಸಲು ಪರಿಶಿಷ್ಟ ಜಾತಿ/ಪಂಗಡ ವಿದ್ಯಾರ್ಥಿಗಳಿಗೆ ವಿಶೇಷ ತರಬೇತಿ ತರಗತಿಗಳನ್ನು ನಡೆಸಲಾಗುತ್ತದೆ.

9. **ವಿವಿಧ ಮೀಸಲಾತಿ ಪಾಲನೆ :**
ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ವಿಭಾಗ/ಘಟಕ ಮತ್ತು ಸಂಯೋಜಿತ ಕಾಲೇಜುಗಳಲ್ಲಿ ಹಾಗೂ ವಸತಿನಿಲಯಗಳಲ್ಲಿ ಪರಿಶಿಷ್ಟ ಜಾತಿ/ಪಂಗಡದ ವಿದ್ಯಾರ್ಥಿಗಳ ಪ್ರವೇಶಾತಿಯಲ್ಲಿ ಮೀಸಲಾತಿ ನಿಯಮಗಳನ್ನು ಸರಿಯಾಗಿ ಪಾಲಿಸುವಂತೆ ನೋಡಿಕೊಳ್ಳಲಾಗುತ್ತದೆ.

10. **ಬುಕ್ ಬ್ಯಾಂಕ್ ಸೌಲಭ್ಯ:**
ಸ್ನಾತಕೋತ್ತರ ವಿಭಾಗಗಳು ಮತ್ತು ಘಟಕ ಕಾಲೇಜುಗಳ ಪರಿಶಿಷ್ಟ ಜಾತಿ/ಪಂಗಡ ವಿದ್ಯಾರ್ಥಿಗಳಿಗೆ ಪಠ್ಯ ಪುಸ್ತಕಗಳಿಗೆ ತೊಂದರೆಯಾಗದಂತೆ ಗ್ರಂಥಾಲಯಗಳಲ್ಲಿ ಪ್ರತ್ಯೇಕ ಬುಕ್ ಬ್ಯಾಂಕ್ ಸೌಲಭ್ಯ ಕಲ್ಪಿಸಲಾಗಿದೆ.

11. **ಕಂಪ್ಯೂಟರ್ ತರಬೇತಿ :**
ಘಟಕ ಹಾಗೂ ಸಂಯೋಜಿತ ಕಾಲೇಜುಗಳ ಮತ್ತು ಸ್ನಾತಕೋತ್ತರ ವಿಭಾಗಗಳ ಪರಿಶಿಷ್ಟ ಜಾತಿ/ಪಂಗಡ ವಿದ್ಯಾರ್ಥಿಗಳು ತಮ್ಮ ವ್ಯಾಸಂಗದ ಜೊತೆಗೆ ಕಂಪ್ಯೂಟರ್ ತರಬೇತಿ ಪಡೆಯ ಬಯಸುವವರಿಗೆ ತರಬೇತಿ ನೀಡಲಾಗುತ್ತದೆ.

12. ನೇಮಕಾತಿಯಲ್ಲಿ ಘಟಕದ ಪಾತ್ರ :
ವಿಶ್ವವಿದ್ಯಾನಿಲಯ ಹಾಗೂ ಘಟಕ ಕಾಲೇಜುಗಳಲ್ಲಿ ಶಿಕ್ಷಕ–ಶಿಕ್ಷಕೇತರ ನೇಮಕಾತಿ ಮಾಡುವಾಗ ಹಾಗೂ ಭಡ್ತಿ ನೀಡುವಾಗ ಜಾರಿಯಲ್ಲಿದ್ದ ಮತ್ತು ಕಾಲಕಾಲಕ್ಕೆ ಬದಲಾಗುವ ಸರಕಾರದ ಆದೇಶಗಳನ್ನು ವಿಶ್ವವಿದ್ಯಾನಿಲಯ ಪಾಲಿಸುವಲ್ಲಿ ಘಟಕವು ಸಕ್ರೀಯ ಪಾತ್ರವಹಿಸುತ್ತದೆ.

13. **ಪರೀಕ್ಷಾ ಕಾರ್ಯಕ್ಕೆ ನೇಮಕಾತಿ :**
ವಿಶ್ವವಿದ್ಯಾನಿಲಯದ ವಿವಿಧ ಪರೀಕ್ಷೆಯ ಕೆಲಸ ಕಾರ್ಯಗಳಿಗೆ ಐದು ವರ್ಷ ಜ್ಯೇಷ್ಠತೆಯಾಧಿಯ ಮೇಲೆ ಪರಿಶಿಷ್ಟ ಜಾತಿ/ಪಂಗಡ ಶಿಕ್ಷಕರನ್ನು ಪ್ರಾತಿನಿಧ್ಯ ಕೊಟ್ಟು ಪರೀಕ್ಷಾ ಕಾರ್ಯಕ್ಕೆ ನೇಮಕಾತಿ ಮಾಡಲಾಗುತ್ತದೆ.

14. ನೌಕರರ ಸೇವಾ ಜೇಷ್ಠತೆಯಲ್ಲಿ ರಿಯಾಯಿತಿ :
ವಿಶ್ವವಿದ್ಯಾನಿಲಯವು ವಸತಿ ಗೃಹ ಹಂಚುವಾಗ/ಬದಲಾಯಿಸುವಾಗ ಹಾಗೂ ವಿವಿಧ ಸಾಲಗಳನ್ನು ಮಂಜೂರು ಮಾಡುವಾಗ ಪರಿಶಿಷ್ಟ ಜಾತಿ /ಪಂಗಡ ನೌಕರರ ಸೇವಾ ಜೇಷ್ಠತೆಯಲ್ಲಿ ರಿಯಾಯಿತಿ ತೋರಿಸಿ ಎಲ್ಲಾ ಸೌಲಭ್ಯಗಳನ್ನು ಒದಗಿಸಲಾಗುತ್ತದೆ.

15. **ವಿದ್ಯಾರ್ಥಿಗಳಿಗೆ ಕೊಠಡಿ ಬಾಡಿಗೆ ಧನಸಹಾಯ:**
ಪ್ರತಿ ವರ್ಷವೂ ಸ್ಥಳೀಯರಲ್ಲದ ಹಾಗೂ ವಿದ್ಯಾರ್ಥಿನಿಲಯಗಳಲ್ಲಿ ವಾಸವಿಲ್ಲದ ಹಾಗೂ ವಿಶ್ವವಿದ್ಯಾನಿಲಯದ ನೇರ ಆಡಳಿತಕ್ಕೊಳಪಟ್ಟ ಕಾಲೇಜು/ಸ್ನಾತಕೋತ್ತರ ವಿಭಾಗಗಳಲ್ಲಿ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟಜಾತಿ/ಪಂಗಡ ವಿದ್ಯಾರ್ಥಿಗಳ ಕೋರಿಕೆ ಮೇರೆಗೆ ಕೊಠಡಿ ಬಾಡಿಗೆ ಧನಸಹಾಯವಾಗಿ ತಿಂಗಳಿಗೆ ತಲಾ ರೂ.75-00ರಂತೆ 10 ತಿಂಗಳ ಅವಧಿಗೆ ಧನಸಹಾಯವನ್ನು ನೀಡಲಾಗುತ್ತದೆ.

16. **ಕ್ರೀಡೆ, ಸಮ್ಮೇಳನ, ವಿಚಾರ ಸಂಕಿರಣಗಳಿಗೆ ಭಾಗವಹಿಸುವ ವಿದ್ಯಾರ್ಥಿಗಳಿಗೆ ಧನಸಹಾಯ :**
ಪ್ರತಿ ವರ್ಷವೂ ವಿಶ್ವವಿದ್ಯಾನಿಲಯದ ನೇರ ಆಡಳಿತಕ್ಕೊಳಪಟ್ಟ ಕಾಲೇಜು /ಸ್ನಾತಕೋತ್ತರ ವಿಭಾಗಗಳಲ್ಲಿ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ಜಾತಿ/ ಪಂಗಡ ವಿದ್ಯಾರ್ಥಿಗಳು ವಿಶ್ವವಿದ್ಯಾನಿಲಯ ಮಟ್ಟದಲ್ಲಿನ ಕ್ರೀಡೆ (ವಿ.ವಿ .ಮಟ್ಟ ) ಪಠ್ಯೇತರ, ಎನ್.ಸಿ.ಸಿ., ಎನ್.ಎಸ್.ಎಸ್., ಸಮ್ಮೇಳನ ವಿಚಾರ ಸಂಕಿರಣ ಮುಂತಾದ ಚಟುವಟಿಕೆಗಳಲ್ಲಿ ರಾಷ್ಟ್ರಮಟ್ಟದಲ್ಲಿ ಭಾಗವಹಿಸಿದ ವಿದ್ಯಾರ್ಥಿಗಳಿಗೆ ತಲಾ 500-00 (ರೂಪಾಯಿ ಐನೂರು ಮಾತ್ರ)ರಂತೆ ಧನಸಹಾಯವನ್ನು ನೀಡಲಾಗುತ್ತದೆ.

17. ಸಂಶೋಧನಾ ವಿದ್ಯಾರ್ಥಿಗಳಿಗೆ ಧನಸಹಾಯ :
ರಾಷ್ಟ್ರೀಯ/ಅಂತರಾಷ್ಟ್ರೀಯ ಸಮ್ಮೇಳನಗಳಲ್ಲಿ ಭಾಗವಹಿಸಿ ಪ್ರಬಂಧ ಮಂಡಿಸಲು ಪರಿಶಿಷ್ಟ ಜಾತಿ/ಪಂಗಡದ ಸಂಶೋಧನಾ ವಿದ್ಯಾರ್ಥಿಗಳಿಗೆ ಧನಸಹಾಯ ನೀಡಲಾಗುತ್ತದೆ.

18. ನಗದು ಬಹುಮಾನ :
ಕ್ರೀಡೆ ಹಾಗೂ ಸಾಂಸ್ಕೃತಿಕ ಸ್ಪರ್ಧೆಗಳಲ್ಲಿ ದಕ್ಷಿಣವಲಯ ಮತ್ತು ಅಖಿಲ ಭಾರತ ಮಟ್ಟಗಳಲ್ಲಿ ಪ್ರಶಸ್ತಿ ವಿಜೇತ ಪರಿಶಿಷ್ಟ ಜಾತಿ/ಪಂಗಡದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ನಗದು ಬಹುಮಾನ ನೀಡಲಾಗುತ್ತದೆ.

19. **ಪಿಹೆಚ್.ಡಿ ಗಾಗಿ ನೋಂದಾವಣೆ :**
ವಿಶ್ವವಿದ್ಯಾನಿಲಯದ ಘಟಕ ಕಾಲೇಜುಗಳಿಂದ ಪಿಹೆಚ್.ಡಿ ಗಾಗಿ ನೋಂದಾವಣೆ ಮಾಡುವ ಪರಿಶಿಷ್ಟ ಜಾತಿ/ಪಂಗಡದ ಬೋಧಕರಿಗೆ FIP Fellowship ಗಳನ್ನು ನೀಡಲಾಗುವುದು.

20. **ಜಾಗೃತಿ ಅಭಿಯಾನ :**
ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಕೋರ್ಸುಗಳಿಗೆ ಪರಿಶಿಷ್ಟ ಜಾತಿ/ಪಂಗಡ ಪದವಿ ವಿದ್ಯಾರ್ಥಿಗಳನ್ನು ಆಕರ್ಷಿಸಲು ಜಾಗೃತಿ ಅಭಿಯಾನವನ್ನು ನಡೆಸಲಾಗುವುದು.

21. ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಚಿನ್ನದ ಪದಕ :
ಸ್ನಾತಕೋತ್ತರ ವಿಭಾಗಗಳಲ್ಲಿ ಪ್ರಥಮ ಪ್ರಯತ್ನದಲ್ಲಿ ಅತಿ ಹೆಚ್ಚು ಅಂಕ ಗಳಿಸಿದ (ಕನಿಷ್ಠ55 ಶೇಕಡಾ) ವಿದ್ಯಾರ್ಥಿಗಳಿಗೆ ಡಾ. ಬಾಬಾ ಸಾಹೇಬ್ ಅಂಬೇಡ್ಕರ್‌ರವರ ಹೆಸರಲ್ಲಿ ಚಿನ್ನದ ಪದಕವನ್ನು ನೀಡಲಾಗುತ್ತದೆ. ಈ ಚಿನ್ನದ ಪದಕವನ್ನು ಕಲಾ, ವಾಣಿಜ್ಯ, ವಿಜ್ಞಾನ, ಶಿಕ್ಷಣ ಹಾಗೂ ಕಾನೂನು ನಿಕಾಯಗಳ ವಿದ್ಯಾರ್ಥಿಗಳಿಗೆ ನೀಡಲಾಗುವುದು.

ಮಂಗಳೂರು ವಿಶ್ವವಿದ್ಯಾನಿಲಯ

------------------------------------

## ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೆ ಲಭ್ಯವಿರುವ ವಿಶೇಷ ಸೌಲಭ್ಯಗಳು ಹಾಗೂ ಕಾರ್ಯಕ್ರಮಗಳು

# ಪರಿಶಿಷ್ಟ ಜಾತಿ/ಪಂಗಡ ಘಟಕ